ಶ್ರೀ ಸಿ. ಎಸ್. ಹುಲುಕೋಟಿ.—ದೋಣಿಯಲ್ಲಿ ಮಳೆಗಾಲ ಬಂದ ಕೂಡಲೇ ಬಹಳ ತೊಂದರೆಯಾಗುತ್ತದೆ. ಆದುದರಿಂದ ಅದನ್ನು ಸಹ ತುರ್ತು ತೆಗೆದು ಕೊಳ್ಳುತ್ತೀರಾ ?

ಶ್ರೀ ಕೆ. ಎಫ್. ಪಾಟೀಲ್.—ಸೈಟು ಪೊಸಿಷನ್ನಿಗೆ ಬಂದ ಕೂಡಲೇ ಕೆಲಸ ಮಾಡಿಸಲಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಸಿ. ಎಸ್. ಹುಲುಕೋಟಿ.—ಅದನ್ನು ಯಾರ ಕಡೆಗೆ ಕಳುಹಿಸಲಾಗಿದೆ ?

ಶ್ರೀ ಕೆ. ಎಫ್. ಪಾಟೀಲ್.—ಡಿ.ಸಿ. ಅವರು ಹುಬ್ಬಳ್ಳಿ ಡಿವಿಜನ್ನಿನ ಡಿ.ಸ್.ಪಿ. ಅವರಿಗೆ ಬರೆದರು. ಅದು ಸೆಕ್ರೆಟೇರಿಯೆಟ್ಟಿಗೆ ಬಂದು ಇಲ್ಲಿಂದ ಐ.ಜಿ.ಪಿ.ಗೆ ಹೋಗಿದೆ.

———

New Railway Lines recommended to and sanctioned by the Central Government.

*Q.—41. Sri S. KARIAPPA (Virupakshipura).—

Will the Government be pleased to state :—

(*a*) the new railway lines recommended to the Central Government during the past five years ;

(*b*) the lines which have been sanctioned by the Central Government during the past five years ?

*A.—Sri B. D. JATTI (Chief Minister).—

(*a*) The following new Railway lines were recommended to the Central Government during the past five years :

(1) Hassan-Mangalore,
(2) Hubli-Karwar,
(3) Talguppa-Bhatkal,
(4) Chitradurga-Rayadurga,
(5) Chamarajanagar-Satyamangalam,
(6) Bangalore-Hosursalem,
(7) Rayabagh-Ilkal-Raichur,
(8) Kadur-Chickmagalur-Saklespur,
(9) Kottur-Harihar,
(10) Bhadravati Malpe,
(11) Gadag-Raichur,
(12) Nipani-Raibag,
(13) Mangalore-Bombay.

(*b*) No new Railway line was sanctioned.

ಶ್ರೀ ಎಸ್. ಕರಿಯಪ್ಪ.—ತಮ್ಮ ರೆಕಮೆಂಡೇಷನ್ ಪ್ರಕಾರ 13 ಲೈನ್‌ಗಳು ಇವೆ. ಒಂದಕ್ಕೂ ಕೂಡ ಸೆಂಟ್ರಲ್ ಗವರ್ನಮೆಂಟಿನವರು ಲಕ್ಷ್ಯವನ್ನೇ ಕೊಟ್ಟಿಲ್ಲ. ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ಅವರು ಇಷ್ಟೇ ಹೇಳಿದ್ದಾರೆ :—

"They were not able to consider any of the e lin.s during the S cond Five-Year P.an period owing to paucity of funds and shortage of essential mate.ials."

ಶ್ರೀ ಎಸ್. ಕರಿಯಪ್ಪ.—ಮೈಸೂರು ರಾಜ್ಯಕ್ಕೆ ಮಾತ್ರ ಈ ರೀತಿ ಹೇಳಿದ್ದಾರೋ ಅಥವಾ ದಕ್ಷಿಣ ಪ್ರಾಂತದ ಇತರ ಪ್ರಾಂತಗಳಿಗೂ ಇದೇ ರೀತಿ ಹೇಳಿದ್ದಾರೋ ?

ಶ್ರೀ ಬಿ. ಡಿ. ಜತ್ತಿ.—ಉಳಿದ ರಾಜ್ಯಗಳಿಗೆ ಹೇಗೆ ಹೇಳಿದ್ದಾರೋ ಗೊತ್ತಿಲ್ಲ. ನಮಗೆ ಮಾತ್ರ ಈ ರೀತಿ ಹೇಳಿದಾರೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟಿತ್ತೊ ಅಷ್ಟು ಮಾತ್ರ ತೆಗೆದುಕೊಂಡಿದ್ದಾರೆ, ಮತ್ತಾವುದನ್ನೂ ತೆಗೆದುಕೊಂಡಿಲ್ಲ.

ಶ್ರೀ ಎಸ್. ಕರಿಯಪ್ಪ.—ಈಗ ಇನ್ನು ಎರಡು ಮೂರನ್ನು ಸೇರಿಸಬಹುದು ಅಲ್ಲವೆ ?

ಶ್ರೀ ಬಿ. ಡಿ. ಜತ್ತಿ.—ಸೇರಿಸಬಹುದು; ಆದರೆ ಸೇರಿಸಿದರೆ ಏನು ತೊಂದರೆ ಬರುತ್ತದೆ ಎಂದು ಹೇಳಲಕ್ಕೆ ಆಗುವುದಿಲ್ಲ.

Dr. R. NAGAN GOWDA.—May I know whether any of these lines like Hassan-Mangalore line, Hubli-Karwar line are being proposed for the Third Five-Year Plan ?

Sri B. D. JATTI.—The Government of Mysore has again proposed 6 important lines to be taken up by the Government of India. We will press and we will see what will be the result.

Sri J. B. MALLARADHYA.—May I know the the priorities indicated by this Government in respect of the railway lines to be taken up ?

Sri B. D. JATTI.—They are :

Hassan-Mangalore,
Hubli-Karwar,
Kottur-Harihar,
Rayabagh-Raichur,
Bangalore-Hosur-Salem.

Sri J. B. MALLARADHYA.—Is the Government aware that the question of the Chamarajanagar-Satyamangalam railway line is being agitated on behalf of the Government of Mysore for over 50 years ?

Sri B. D. JATTI.—Yes.

Sri J. B. MALLARADHYA.—How is it that that line has not received priority in the recommendation made by Government?

Sri B. D. JATTI.—I do not mean to say that we have not given any importance to that line. I only read out the priority that we have mentioned to the Government of India.

Sri B. VAIKUNTA BALIGA.—Is an Government aware that the Mangalore-Hassan railway line has been agitated for over the last 75 years?

Sri B. D. JATTI.—I do not know, but that question is being agitated.

ಶ್ರೀ ಬಿ. ರಾಚಯ್ಯ.—ತಾವು ಶಿಫಾರಸು ಮಾಡಿರುವ ಪ್ರಕಾರ ಎಷ್ಟು ಲೈನ್ ಸರ್ವೆ ಆಗಿದೆ? ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಸೇರಿಸ ಬೇಕೆಂದು ತೀರ್ಮಾನ ಮಾಡಿದ್ದಾರೆ?

Sri B. D. JATTI.—Unless the lines are approved by the Government of India there is no point in surveying, and wasting Government money.

Sri U. M. MADAPPA.—Is the Government aware that a resolution has been passed by this House to the effect that the Chamarajanagar-Satyamangalam line should be taken up immediately?

9 A.M.

Sri B. D. JATTI.—If the Hon'ble Member knows that a resolution has been passed by this House, why should he ask about it?

Sri U. M. MADAPPA.—I wanted information from the Hon'ble Chief Minister.

Mr. SPEAKER.—You know already that a resolution to that effect has been passed in the House.

Sri U. M. MADAPPA.—What prevents him from giving the information to the other Hon'ble Members?

Mr. SPEAKER.—He was not here then.

Sri U. M. MADAPPA.—May I know whether the Government have recommended the case on the basis of the resolution passed in the House?

Sri B. D. JATTI.—Whether the resolution is passed or not, the Government will have to press for the railway line now.

Sri T. PARTHASARATHY.—I request the Chief Minister to table a resolution and forward it to the Government of India just as we did for Sharavathi Valley.

Sri B. D. JATTI.—If the occasion arises, the Government will consider it.

Sri C. K. RAJIAH SETTY.—Out of these 13 lines, is it possible to give priority to dead ends?

Sri B. D. JATTI.—It is left for the Government of India to decide as to on what basis they should give priority. We will press our own cases.

Sri G. VENKATAI GOWDA.—Several railway lines have been sanctioned for the North Indian States. Will the Government in press it on the Government of India that South India is neglected in this regard?

Sri B. D. JATTI.—We have pressed for these lines five or six times, and once again we are going to press for them.

ಶ್ರೀಮತಿ ನುಶೀಲಾಬಾಯಿ ಹೀರಾಚಂದ್ ಷಾ.—ನಿಪ್ಪಾಣಿ-ರಾಯಚೂರು ಲೈನು ಸರ್ವೆ ಆಗಿದೆಯೇ?

ಶ್ರೀ ಬಿ. ಡಿ. ಜತ್ತಿ.—ಅವರು ಕೇಳುವ ಪ್ರಶ್ನೆ ಹೀಗೆ ಇದೆ. ನಿಪ್ಪಾಣಿ ರಾಯಬಾಗ ರಾಯಚೂರು ಲೈನು ಒಂದು ಇದೆ; ನಿಪ್ಪಾಣಿ ರಾಯಬಾಗ ಮೈಯ ನಂಕೇಶ್ವರ ಒಂದು ಲೈನು ಇದೆ; ನಿಪ್ಪಾಣಿ ರಾಯಭಾಗ್ ಮೈಯ ಇಲ್‌ಕಲ್ ಒಂದು ಇದೆ.

Sri M. RAJASEKHARA MURTHY.—May I know whether the order of priority was fixed by the Government of India or whether it was fixed on the recommendation made by the State Government?

Sri B. D. JATTI.—The State Government will have to recommend, but ultimately the Government of India will fix up the priority.

Sri RAMAKRISHNA HEGDE.—May I know whether the Chief Minister is aware that the construction of a railway line linking Talaguppa with Alnavar was proposed four years back when Sri Lal Bahadur Sastry visited North Kanara and he made a statement assuring that the proposal would be given active consideration? If so, why have the Government not recommended that line?

Sri B. D. JATTI.—When the Hon'ble the Railway Minister came here, he had made a Press statement and it had appeared in the Press also. Why they have not taken action, I do not know.

Sri RAMAKRISHNA HEGDE.—If the Chief Minister was aware of this fact, why did the Government of Mysore not recommend that line among these 13 lines ?

Sri B. D. JATTI.—I mentioned some 13 lines. But there are in all 18 lines and this is also there.

ಶ್ರೀ ಎಂ. ಎಂ. ಜೆ. ನಡ್ಯೋಜಾತಪ್ಪಯ್ಯ.—ಕೊಟ್ಟೂರು—ಹರಿಹರ ರೈಲ್ವೆ ಮೂರನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಒತ್ತಾಯ ಮಾಡುವುದಿಲ್ಲ ಎಂದು ಹೇಳಲಿಲ್ಲ. ಒತ್ತಾಯ ಮಾಡುತ್ತೇವೆ.

Sri M. MALLIKARJUNASWAMY.—In view of the fact that there are many miles of rail, thousands of wagons and hundreds of engines which have long passed their rightful age for renewal as has been observed in T. T. Krishnamachari's Report on India Railways, have the Government of India Railway Ministry taken any definite decision to introduce rationalisation instead of opening new lines ?

Sri B. D. JATTI.—It is a matter concerning the Government of India and that Government will be in a better position to reply.

Sri K. P. GADAG.—May I know whether any broad-gauge lines have been recommended instead of meter gauge ?

Sri B. D. JATTI.—According to my information, no.

ಶ್ರೀ ಕೆ. ಎಲ್. ನರಸಿಂಹಯ್ಯ.—ಗೋರಿಬಿದನೂರಿನಿಂದ ಚಿತ್ರದುರ್ಗಕ್ಕೆ ರೈಲ್ವೆ ಲೈನ್ ಹಾಕಬೇಕೆಂದು ಈಗ ನೂರು ವರ್ಷಗಳಿಂದ ಎಜಿಟೇಷನ್ ಇದೆ. ಈಗ ಅದು ಏನಾಯಿತು, ಸ್ವಾಮಿ ?

Sri B. D JATTI.—I am not aware of it.

ಶ್ರೀ ಡಿ. ಎಚ್. ರುದ್ರಪ್ಪ.—ಕಡೂರು-ಚಿಕ್ಕಮಗಳೂರು-ನಕಲೇಶಪುರ ಮಾರ್ಗಕ್ಕೆ ರೈಲ್ವೆ ಲೈನ್ ಹಾಕಬೇಕು ಎಂದು ಕೇಳುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಬಂದಿದೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಇಂಡಿಯಾ ಸರ್ಕಾರದವರು ಉತ್ತರದ ಜೋನ್‌ನಲ್ಲಿ ಸಾವಿರಾರು ಮೈಲುಗಳ ರೈಲ್ವೆ ಲೈನ್ ಹಾಕುತ್ತಿದ್ದಾರೆ. ದಕ್ಷಿಣದ ಜೋನ್ ವಿಷಯವನ್ನು ಕೇಳಿದರೆ ವಿಚಾರಮಾಡಬೇಕು, ವಿಚಾರಮಾಡಬೇಕು ಎಂದು ಹೇಳುತ್ತಾರೆ. ಈಗಲೂ ಅದೇ ನೀತಿಯನ್ನು ಅನುಸರಿಸುತ್ತಿದ್ದಾರೆಯೇ ಹೇಗೆ ? ಹಾಸನ ಮಂಗಳೂರು ಲೈನ್ ಹಾಕುವ ವಿಚಾರ ಯಾವ ಸ್ಟೇಜಿನಲ್ಲಿದೆ ?

ಶ್ರೀ ಬಿ. ಡಿ. ಜತ್ತಿ.—ಸ್ಟೇಜ್ ಹೇಳಬೇಕಾದರೆ, It is under consideration. ತೊಂದರೆ ಇದ್ದದ್ದು ಮಂಗಳೂರು ಪೋರ್ಟ್. ಅದಕ್ಕೂ ಇದಕ್ಕೂ ಲಿಂಕ್‌ಅಪ್ ಮಾಡಿದ್ದಾರೆ.

N.E.S. Blocks for Channarayapatna and Nuggehalli.

*Q.—47. Sri N. G. NARASIMHE GOWDA (Sravanabelagola).—

Will the Government be pleased to state :—

whether they propose to sanction two N.E.S. Blocks for Channarayapatna Taluk, one for Channarayapatna and the other for Nuggehalli ?

A.—Sri H. C. LINGA REDDY (Deputy Minister for Planning and Development).—

The claims of Channarayapatna Taluk will be considered by Government at the time of the next allotment of N.E.S. Blocks. The Taluk will be the unit for sanctioning Blocks and not individual villages or towns.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ಪ್ರಶ್ನೆಗೆ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು.

ಅಧ್ಯಕ್ಷರು.—ಅವರೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಒಂದು ಲಕ್ಷ 40 ಸಾವಿರ ಪ್ರಜಾಸಂಖ್ಯೆ ಇದ್ದು, ಅನೇಕ ಸಾರಿ ಮುಖ್ಯ ಮಂತ್ರಿಗಳು, ಡೆಪ್ಯುಟಿ ಕಮಿಷನರುಗಳು ಅಲ್ಲಿಗೆ N.E.S. ಬ್ಲಾಕ್ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದರೂ ಇದುವರೆಗೂ ಚನ್ನರಾಯಪಟ್ಟಣಕ್ಕೆ N.E.S. ಬ್ಲಾಕ್ ಕೊಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹೆಚ್ಚು ಜನ ಕೇಳುತ್ತಾ ಇದ್ದಾರೆ. ಇರುವ ಬ್ಲಾಕ್ಸ್ ಕಡಮೆ. ಅದಕ್ಕೋಸ್ಕರ ಪ್ರಯಾರಿಟಿಯ ಪ್ರಕಾರ ಕೊಡುತ್ತಾ ಹೋಗುತ್ತಿದ್ದೇವೆ. ನಿಮಗೂ ಬರುತ್ತದೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ನಾನು ಮೊದಲೇ ಮುಖ್ಯ ಮಂತ್ರಿಗಳೇ ಜವಾಬು ಕೊಡಬೇಕು ಎಂದು ಹೇಳಿದೆ. ಕಾಂಗ್ರೆಸ್ ಕಾರ್ಪಿಟ್ಯೂಯೆನ್ಸಿ ಇರುವ ಕಡೆಗೆ ಇದುವರೆಗೂ ಕೊಟ್ಟು ನಾನ್-ಕಾಂಗ್ರೆಸ್ ಕಾರ್ಪಿಟ್ಯೂಯೆನ್ಸಿ ಇರುವ ಕಡೆಗೆ ಇದುವರೆಗೂ ಕೊಡದೆ ಇರಲು ಕಾರಣವೆನು ? ಏನು ಇದು ಸರ್ಕಾರದ ನೀತಿ ?

ಅಧ್ಯಕ್ಷರು.—ಅದಕ್ಕೆ ಎಷ್ಟೋ ಸಾರಿ ಉತ್ತರ ಕೊಟ್ಟಿದ್ದಾರೆ. ಈ ಸಲ ಕೊಡಿ ಎಂದು ಹೇಳಿ.

ಶ್ರೀ ಟಿ ಮರಿಯಪ್ಪ.—ನನ್ನ ಕಾರ್ಪಿಟ್ಯೂಯೆನ್ಸಿಗೆ N.E.S. ಬ್ಲಾಕ್ ಕೊಟ್ಟಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹಾಸನ ಡಿಸ್ಟ್ರಿಕ್ಟಿಗೆ ಈ ವರ್ಷ N.E.S. ಬ್ಲಾಕ್ ಕೊಡುತ್ತೀರಾ ?